# ವಿದ್ಯುಚ್ಛಕ್ತಿ ಲೋಕಪಾಲರು

## ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ಇವರ ಮುಂದೆ.

**ನಂ:16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು.**

**ಪ್ರಕರಣ ಸಂಖ್ಯೆ:ಒಎಂಬಿ/ಎಂ/ಜಿ–307/2018ಡಿ–1146**
**ದಿನಾಂಕ:27–12–2018**

**ಮೇಲ್ಮನವಿದಾರ,**

ಶ್ರೀ ಅನಂತ ನಾಯಕ್,
ಕೊರಚೆಬೆಟ್ಟು, ಕುಕ್ಕುಂದೂರು ಗ್ರಾಮ ಮತ್ತು ಅಂಚೆ,
ಕಾರ್ಕಳ ತಾಲೂಕು. ಉಡುಪಿ ಜಿಲ್ಲೆ–576 117.
(ರವರ ಪ್ರತಿನಿಧಿಯಾಗಿ ಶ್ರೀ ಸತ್ಯನಾರಾಯಣ ಉಡುಪ, ಪ್ರಧಾನ ಕಾರ್ಯದರ್ಶಿ, ಭಾರತೀಯ ಕಿಸಾನ್ ಸಂಘ (ರಿ) ಉಡುಪಿ ಜಿಲ್ಲೆ)

**ಪ್ರತಿವಾದಿಗಳು:**

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
   ಮೆಸ್ಕಾಂ, ಕಾರ್ಕಳ ಉಪ–ವಿಭಾಗ.
   ಕಾರ್ಕಳ ತಾಲೂಕು. 574104.
2. ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
   ಕಾರ್ಯ ಮತ್ತು ಪಾಲನಾ ವಿಭಾಗ,
   ಮೆಸ್ಕಾಂ, ಮಾರುತಿ ವೀಥಿಕ, ಉಡುಪಿ ವಿಭಾಗ, ಉಡುಪಿ–576101.
3. ಮುಖ್ಯ ಇಂಜಿನಿಯರ್ (ವಿ)
   ಮೆಸ್ಕಾಂ, ಮಂಗಳೂರು ವಲಯ.

ಪ್ರಸ್ತುತ ಪ್ರಕರಣದಲ್ಲಿ ಶ್ರೀ ಅನಂತ ನಾಯಕ್, ಕೊರಚೆಬೆಟ್ಟು, ಕುಕ್ಕುಂದೂರು ಗ್ರಾಮ ಮತ್ತು ಅಂಚೆ, ಇವರು ತಮ್ಮ ಪಂಪ್‌ಸೆಟ್ ಸ್ಥಾವರ ಸಂಖ್ಯೆ–1841 ಖಾತೆಯಲ್ಲಿ 2008ನೇ ಇಸವಿಯ ಸೆಪ್ಟಂಬರ್‌ನಿಂದ ಜಮೆ ಇರುವ ಹಣವನ್ನು ಹಿಂದಿರುಗಿಸುವಂತೆ ಅನೇಕ ವರ್ಷಗಳಿಂದ ಕೋರುತ್ತಾ ಬಂದಿದ್ದು, ಅದನ್ನು ಹಿಂದಿರುಗಿಸಲು ನಿರಾಕರಿಸಿದ ಕಾರಣ ತಮ್ಮ ಗೃಹ ಬಳಕೆಯ ಖಾತೆಗಾದರೂ ಹೊಂದಾಣಿಕೆ ಮಾಡುವಂತೆ ಕೋರಿದ್ದು, ಅದಕ್ಕೂ ಸಂಬಂಧಪಟ್ಟ ಅಧಿಕಾರಿಯು ಒಪ್ಪದ ಕಾರಣ ದಿನಾಂಕ:10–06–2018 ರಂದು ಉಡುಪಿ ಜಿಲ್ಲೆ, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ (ಸಿಜಿಆರ್‌ಎಫ್) ದೂರನ್ನು ಸಲ್ಲಿಸಿರುತ್ತಾರೆ. ಉಡುಪಿ ಜಿಲ್ಲೆಯ ಸಿಜಿಆರ್‌ಎಫ್ ಅಧ್ಯಕ್ಷರು ದಿನಾಂಕ:27–

10-2018 ರಂದು ದೂರುದಾರರ ದೂರಿನ ವಿಷಯ ಕುರಿತು ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಮೇಲಾಧಿಕಾರಿಗಳ ಮುಖಾಂತರ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕಾರ್ಪೋರೇಟ್ ಕಛೇರಿ, ಮಂಗಳೂರು ಇಲ್ಲಿಗೆ ಸಲ್ಲಿಸಲಾಗಿದ್ದು, ಕಂಪನಿಯ ಆಡಳಿತ ಕಛೇರಿಯಿಂದ ಸೂಕ್ತ ನಿರ್ದೇಶನಗಳು ಬರುವವರೆಗೆ ತಮ್ಮೊಂದಿಗೆ ಸಹಕರಿಸುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಮನವಿದಾರರು ತಮ್ಮ ಕೃಷಿ ಪಂಪ್ ಸ್ಥಾವರ IP 1841 ರ ಖಾತೆಯಲ್ಲಿ ಸೆಪ್ಟಂಬರ್ 2008 ರಂದು ಜಮೆ ಇರುವ ಹಣವನ್ನು ವಾರ್ಷಿಕ 24% ಬಡ್ಡಿಯೊಂದಿಗೆ ಹಿಂತಿರುಗಿಸುವಂತೆ ಹಾಗೂ ಖಾತೆಯಲ್ಲಿ ಜಮೆ ಇರುವ ಹಣವನ್ನು ಕೇಳಿದಲ್ಲಿ 60 ದಿನಗಳಲ್ಲಿ ಹಿಂದಿರುಗಿಸಬೇಕಾಗಿದ್ದು, ಆ ಹಣವನ್ನು ಹಿಂದಿರುಗಿಸದೆ ಇರುವ ಕಾರಣ, ಮುಂದೆ ಮೆಸ್ಕಾಂ ಅಧಿಕಾರಿಗಳು ಹಣ ಹಿಂತಿರುಗಿಸುವ ದಿನದವರೆಗೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಯಮಾವಳಿಯಂತೆ ಪ್ರತಿದಿನಕ್ಕೆ ರೂ.50/- ರಂತೆ ದಂಡನಾ ಶುಲ್ಕ ನೀಡಲು ಆದೇಶಿಸಲು ಕೋರಿ ಫಾರ್ಮ "ಬಿ" ಯಲ್ಲಿ ಈ ಪ್ರಾಧಿಕಾರದ ಮುಂದೆ ದೂರು ಅರ್ಜಿ ಸಲ್ಲಿಸಿರುತ್ತಾರೆ.

ದಿನಾಂಕ:28-11-2018 ರಂದು ಮೇಲ್ಮನವಿದಾರರು ಹಾಗೂ ಸಹಾಯಕ ಕಾರ್ಯನಿರ್ವಹಕ ಅಭಿಯಂತರರು, ಮೆಸ್ಕಾಂ, ಕಾರ್ಕಳ, ಪ್ರತಿವಾದಿ 1 ಇವರಿಗೆ ನೋಟೀಸ್ ನೀಡಿ Karnataka Electricity Regulatory Commission (Consumer Grivance Redressal Forum & Ombudsman) Regulations, 2004 ರ Regulation-20 (1) ರ ಪ್ರಕಾರ ಉಭಯ ಪಕ್ಷದವರು ಸಂಧಾನ ಮೂಲಕ ರಾಜಿ ಮಾಡಿಕೊಳ್ಳಲು ಇರುವ ಅವಕಾಶ ಹಾಗೂ ಅದರ ಪ್ರಯೋಜನ ಪಡೆಯಲು ತಿಳಿಸುತ್ತಾ, ದಿನಾಂಕ:10-12-2018 ರಂದು ವಿದ್ಯುಚ್ಛಕ್ತಿ ಲೋಕಪಾಲರ ಕಛೇರಿಗೆ ವಿಚಾರಣೆಗೆ ಹಾಜರಾಗಲು ತಿಳಿಸಲಾಯಿತು.

ದಿನಾಂಕ:10-12-2018 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮೆಸ್ಕಾಂ, ಕಾರ್ಕಳ, ಪ್ರತಿವಾದಿ-1 ಇವರು ವಿಚಾರಣೆಗೆ ಹಾಜರಾಗಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ವಿಚಾರಣೆ ಕಾಲಕ್ಕೆ ಹಾಜರಿದ್ದ ಮೇಲ್ಮನವಿದಾರರ ಪ್ರತಿನಿಧಿ ಶ್ರೀ ಸತ್ಯನಾರಾಯಣ ಉಡುಪ ಇವರು ವಿಚಾರಣೆಯ ಮುಂದಿನ ದಿನಾಂಕದಂದು ಪ್ರತಿವಾದಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಇವರು ಸಲ್ಲಿಸಿರುವ ಹೇಳಿಕೆಗೆ ಪ್ರತಿಹೇಳಿಕೆಯನ್ನು ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಈ ಮಧ್ಯೆ ದಿನಾಂಕ:18-12-2018 ರಂದು ಸಿಜಿಆರ್‌ಎಫ್, ಉಡುಪಿ, ಇವರು ಅರ್ಜಿದಾರರು ವಿದ್ಯುಚ್ಛಕ್ತಿ

ಲೋಕಪಾಲರ ಮುಂದೆ ಮೇಲ್ಮನವಿ ಅರ್ಜಿ ಸಲ್ಲಿಸಿರುವ ಕಾರಣ ತಮ್ಮ ಮುಂದೆ ಸಲ್ಲಿಸಲಾದ ದೂರು ಅರ್ಜಿಯನ್ನು ವಿಲೇಗೊಳಿಸಿ ಆದೇಶ ಹೊರಡಿಸಿರುತ್ತಾರೆ. ದಿನಾಂಕ:20-12-2018 ರಂದು ಪ್ರಕರಣವನ್ನು ಮತ್ತೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸದರಿ ದಿನದಂದು ಮೇಲ್ಮನವಿದಾರರಾಗಲಿ ಅವರ ಪ್ರತಿನಿಧಿಯಾಗಲಿ ಹಾಜರಿರುವುದಿಲ್ಲ.

**ಸಂಖ್ಯೆ:ಒಎಂಬಿ/ಎಂ/ಜಿ-307/2018/ಡಿ-1179 ದಿನಾಂಕ:27-12-2018**

# <u>ಆದೇಶ</u>

ಮೇಲ್ಮನವಿದಾರರು ಹಾಗೂ ಅವರ ಪ್ರತಿನಿಧಿ ಇಬ್ಬರೂ ಗೈರಾದ ಕಾರಣ ಮೇಲ್ಮನವಿ ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಲಾಗಿದೆ.

ಸಹಿ/-
(ಎಸ್.ಎಸ್.ಪಟ್ಟಣಶೆಟ್ಟಿ)
ವಿದ್ಯುಚ್ಛಕ್ತಿ ಲೋಕಪಾಲರು

1. ಶ್ರೀ ಅನಂತ ನಾಯಕ್,
ಕೊರಚೆಬೆಟ್ಟು, ಕುಕ್ಕುಂದೂರು ಗ್ರಾಮ ಮತ್ತು ಅಂಚೆ,
ಕಾರ್ಕಳ ತಾಲೂಕು. ಉಡುಪಿ ಜಿಲ್ಲೆ-576 117.
(ರವರ ಪ್ರತಿನಿಧಿಯಾಗಿ ಶ್ರೀ ಸತ್ಯನಾರಾಯಣ ಉಡುಪ, ಪ್ರಧಾನ ಕಾರ್ಯದರ್ಶಿ,
ಭಾರತೀಯ ಕಿಸಾನ್ ಸಂಘ (ರಿ) ಉಡುಪಿ ಜಿಲ್ಲೆ)
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಮೆಸ್ಕಾಂ, ಕಾರ್ಕಳ ಉಪ-ವಿಭಾಗ.
ಕಾರ್ಕಳ ತಾಲೂಕು. 574104.
3. ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನಾ ವಿಭಾಗ,
ಮೆಸ್ಕಾಂ, ಮಾರುತಿ ವೀಥಿಕ, ಉಡುಪಿ ವಿಭಾಗ, ಉಡುಪಿ-576101.
4. ಮುಖ್ಯ ಇಂಜಿನಿಯರ್ (ವಿ), ಮೆಸ್ಕಾಂ,
ಮಂಗಳೂರು ವಲಯ, ಪ್ಯಾರಾ ಡೈಮ್ ಪ್ಲಾಜಾ, 5 ನೇ ಮಹಡಿ,
ಎ.ಬಿ.ಶೆಟ್ಟಿ ವೃತ್ತ, ಪಾಂಡೇಶ್ವರ, ಮಂಗಳೂರು-575 001.
5. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ,
ಮೆಸ್ಕಾಂ, ಅಶ್ವಿನಿ ಬಿಲ್ಡಿಂಗ್, ಎನ್.ಹೆಚ್-66, ಅಂಬಲಪಾಡಿ ಬೈಪಾಸ್ ಹತ್ತಿರ,.ಉಡುಪಿ.
6. ಮಾನ್ಯ ಅಧ್ಯಕ್ಷರುರವರರು ಆಪ್ತ ಕಾರ್ಯದರ್ಶಿ, ಕವಿನಿಆ.

7. ಮಾನ್ಯ ಸದಸ್ಯರು (ಎ)ರವರ ಆಪ್ತ ಕಾರ್ಯದರ್ಶಿ, ಕವಿನಿಆ.
8. ಮಾನ್ಯ ಸದಸ್ಯರು (ಎಂ)ರವರ ಆಪ್ತ ಕಾರ್ಯದರ್ಶಿ, ಕವಿನಿಆ.
9. ಮಾನ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕವಿನಿಆ.